ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು
ADIKAVI SRI MAHARSHI VALMIKI UNIVERSITY, RAICHUR
ಯರಗೇರಾ-584133, ರಾಯಚೂರು, ಕರ್ನಾಟಕ ರಾಜ್ಯ, ಭಾರತ
ಆಡಳಿತ ವಿಭಾಗ E-mail: registrarrur@gmail.com

ಕ್ರ. ಸಂ. ಆಶ್ರೀಮವಿರಾ/ಆಡಳಿತ/2025-26/2587 ದಿನಾಂಕ: 27/1/26

ವಿಷಯ : ದಿನಾಂಕ 23.01.2026 ರಂದು ಜರುಗಿದ ವಿಶೇಷ ಸಿಂಡಿಕೇಟ್ ಸಭೆಯ ನಡಾವಳಿಗಳನ್ನು ಕಳಿಸುವ ಕುರಿತು.

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ, ದಿನಾಂಕ 23.01.2026 ರಂದು ಜರುಗಿದ ವಿಶೇಷ ಸಿಂಡಿಕೇಟ್ ಸಾಮಾನ್ಯ ನಡಾವಳಿಗಳನ್ನು ಈ ಪತ್ರದೊಂದಿಗೆ ಲಗತ್ತಿಸಿ ತಮ್ಮ ಅವಗಾಹನೆಗಾಗಿ ಸಲ್ಲಿಸಲಾಗಿದೆ.

ಕುಲಸಚಿವರು
ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ,
ರಾಯಚೂರು

ಕುಲಸಚಿವರು
ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ
ರಾಯಚೂರು

ಇವರಿಗೆ :

01. ಮಾನ್ಯ ರಾಜ್ಯಪಾಲರ ಕಾರ್ಯದರ್ಶಿಗಳು, ರಾಜಭವನ, ಬೆಂಗಳೂರು-560001.
02. ಮಾನ್ಯ ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ(ವಿಶ್ವವಿದ್ಯಾನಿಲಯಗಳು), ಕರ್ನಾಟಕ ಸರ್ಕಾರ, ಬಹುಮಹಡಿ ಕಟ್ಟಡ, ಬೆಂಗಳೂರು-560001.
03. ವಿಶ್ವವಿದ್ಯಾನಿಲಯದ ಎಲ್ಲಾ ಸಿಂಡಿಕೇಟ್ ಸದಸ್ಯರುಗಳಿಗೆ, ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು.
04. ಆಯುಕ್ತರ/ಜಂಟಿ ನಿರ್ದೇಶಕರು ಕಾಲೇಜು ಶಿಕ್ಷಣ ಇಲಾಖೆ, ಕಲಬುರಗಿ.
05. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಪ್ಯಾಲೆಸ್ ರಸ್ತೆ, ಬೆಂಗಳೂರು-560001.
06. ನಿರ್ದೇಶಕರು, ವೈದ್ಯಕೀಯ ಕಾಲೇಜು ಶಿಕ್ಷಣ, ಬೆಂಗಳೂರು-560001.
07. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು-560001
08. ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು -560001
09. ಕುಲಸಚಿವರು(ಮೌಲ್ಯಮಾಪನ), ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು.
10. ಹಣಕಾಸು ಅಧಿಕಾರಿಗಳು, ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು.
11. ಮುಖ್ಯಸ್ಥರು/ಸಂಯೋಜಕರು ಎಲ್ಲಾ ಅಧ್ಯಯನ ವಿಭಾಗಗಳು, ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ ರಾಯಚೂರು.
12. ವಿದ್ಯಾರ್ಥಿ ಕಲ್ಯಾಣ ಅಧಿಕಾರಿಗಳು, ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು.
13. ಉಪ ಕುಲಸಚಿವರು, ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು.
14. ನಿರ್ದೇಶಕರು, ಕಾ.ಅ.ಮಂ., ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು.
15. ಗ್ರಂಥಪಾಲಕರು, ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು.
16. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು.
17. ಸಂಯೋಜಕರು, ಕ್ರೀಡಾ ವಿಭಾಗ, ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು.
18. ಕುಲಪತಿಗಳ ಆಪ್ತ ಕಾರ್ಯದರ್ಶಿ/ಕುಲಸಚಿವರ ಆಪ್ತ ಸಹಾಯಕ, ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು.
19. ಕಛೇರಿ ಪ್ರತಿ.

| | |
|---|---|
| | **ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು**<br>**ADIKAVI SRI MAHARSHI VALMIKI UNIVERSITY, RAICHUR**<br>ಮಂತ್ರಾಲಯ ರಸ್ತೆ, ರಾಯಚೂರು<br>**ಆಡಳಿತ ವಿಭಾಗ** |

**ದಿನಾಂಕ 23.01.2026 ರಂದು ಶುಕ್ರವಾರ ಬೆಳಗ್ಗೆ 11:00 ಗಂಟೆಗೆ ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯದ ಆಡಳಿತ ಕಛೇರಿಯಲ್ಲಿರುವ "ಸಿಂಡಿಕೇಟ್ ಸಭಾಂಗಣ" ದಲ್ಲಿ ನಡೆದ ವಿಶೇಷ ಸಿಂಡಿಕೇಟ್ ಸಭೆಯ ನಡಾವಳಿಗಳು.**

**ಸಭೆಯಲ್ಲಿ ಉಪಸ್ಥಿತರಿದ್ದ ಸದಸ್ಯರು :**

1) ಡಾ. ಶಿವಾನಂದ ಕೆಳಗಿನಮನಿ, ಗೌರವಾನ್ವಿತ ಕುಲಪತಿಗಳು – ಅಧ್ಯಕ್ಷರು
2) ಡಾ. ಕೆ. ವೆಂಕಟೇಶ್, ಡೀನರು: ಸಮಾಜ ವಿಜ್ಞಾನ ನಿಕಾಯ – ಸದಸ್ಯರು
3) ಡಾ. ನಾಗರತ್ನ ಎಂ. ನಾಯ್ಕ್ – ಸದಸ್ಯರು
4) ಶ್ರೀ ಶ್ರೇಯಂಕ್ ಹೆಚ್. ವಿ. – ಸದಸ್ಯರು
5) ಡಾ. ಮೀನಾಕ್ಷಿ ಖಂಡಿಮಠ – ಸದಸ್ಯರು
6) ಶ್ರೀ ಡಿ.ಆರ್. ಚಿನ್ನ – ಸದಸ್ಯರು
7) ಶ್ರೀ ಜೀಶಾನ್ ಅಖಿಲ್ ಸಿದ್ಧಿಖಿ – ಸದಸ್ಯರು
8) ಶ್ರೀ ಶಿವಣ್ಣ ತಂದೆ ಬುಡ್ಡಪ್ಪ ತಪ್ಪಲದೊಡ್ಡಿ – ಸದಸ್ಯರು
9) ಶ್ರೀ ಚನ್ನಬಸವ ತಂದೆ ಬಸವರಾಜಪ್ಪ – ಸದಸ್ಯರು
10) ಶ್ರೀ ಚಂದ್ರಶೇಖರ ಲಿಂಗದಳ್ಳಿ – ಸದಸ್ಯರು
11) ಪ್ರೊ. ಪಾರ್ವತಿ ಸಿ.ಎಸ್., ಡೀನರು: ಶಿಕ್ಷಣ ನಿಕಾಯ (ಪ್ರಭಾರ) – ಸದಸ್ಯರು
12) ಡಾ. ಸುಯಮೀಂದ್ರ ಕುಲಕರ್ಣಿ ಡೀನರು: ವಿಜ್ಞಾನ ನಿಕಾಯ (ನಿರ್ದೇಶಕರು ಸಿಡಿಸಿ) – ಸದಸ್ಯರು (ವಿಶೇಷ ಆಹ್ವಾನಿತರು)
13) ಪ್ರೊ. ಜ್ಯೋತಿ ದಮ್ಮ ಪ್ರಕಾಶ್, ಕುಲಸಚಿವರು (ಮೌಲ್ಯಮಾಪನ) – ಸದಸ್ಯರು
14) ಡಾ. ಚನ್ನಪ್ಪ ಎ., ಕೆ.ಎ.ಎಸ್. (ಸೀನಿಯರ್ ಸೂಪರ್ ಟೈಂ ಸ್ಕೇಲ್) – ಸದಸ್ಯ ಕಾರ್ಯದರ್ಶಿಗಳು

ಕುಲಪತಿಗಳು ಹಾಜರಿದ್ದ ಎಲ್ಲಾ ಸಿಂಡಿಕೇಟ್ ಸದಸ್ಯರನ್ನು ಸ್ವಾಗತಿಸುತ್ತಾ ಸಭೆಯನ್ನು ನಡೆಸಲು ಕುಲಸಚಿವರಿಗೆ ವಹಿಸಿದರು. ಕುಲಸಚಿವರು ಸಭೆಯ ಕಾರ್ಯಸೂಚಿಯ ಪ್ರಕಾರವಾಗಿ ಸಭೆಯ ಮುಂದೆ ವಿಷಯಗಳನ್ನು ಮಂಡಿಸಿದರು.

**ವಿಷಯ ಕ್ರಮಾಂಕ (1) :**

**ದಿನಾಂಕ 22.01.2026 ರಂದು ನಡೆದ ವಿದ್ಯಾವಿಷಯಕ ಪರಿಷತ್ ವಿಶೇಷ ಸಭೆಯ ನಡಾವಳಿಗಳನ್ನು ಅನುಮೋದಿಸುವ ಕುರಿತು.**

ಅ. ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯದ ಅಧೀನದಲ್ಲಿ ಬರುವ ಕಾಲೇಜುಗಳ 2026–27ನೇ ಸಾಲಿನ ಸಂಲಗ್ನತೆ ಕುರಿತು.

ವಿದ್ಯಾವಿಷಯಕ ಪರಿಷತ್ ಸಭೆಯ ಅನುಮೋದನೆ ನೀಡಿದ ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯದ ಅಧೀನದಲ್ಲಿ ಬರುವ ಕಾಲೇಜುಗಳ 2026–27ನೇ ಸಾಲಿನ ಸಂಲಗ್ನತೆ ಕುರಿತು ಈ ಕೆಳಗಿನಂತೆ ವಿಷಯ ಮಂಡಿಸಲಾಯಿತು

1. ಆದಿಕವಿ ಶ್ರೀ ಮಹರ್ಷಿ ವಿಶ್ವವಿದ್ಯಾನಿಲಯದ ಅಡಿಯಲ್ಲಿ ಬರುವಂತಹ ರಾಯಚೂರು ಮತ್ತು ಯಾದಗಿರಿ ಜಿಲ್ಲೆಗಳಲ್ಲಿ 2026–27ನೇ ಶೈಕ್ಷಣಿಕ ಸಾಲಿನ ಸಂಯೋಜನೆಗೆ ಒಟ್ಟು 183 ಮಹಾವಿದ್ಯಾಲಯಗಳು ಅರ್ಜಿ ಸಲ್ಲಿಸಿರುತ್ತವೆ.
2. 45 ಕ್ಕಿಂತ ಹೆಚ್ಚು ಅಂಕಗಳನ್ನು ಪಡೆದು ಅರ್ಹತೆ ಹೊಂದಿರುವ ಒಟ್ಟು ಮಹಾವಿದ್ಯಾಲಯಗಳು 167.
3. 45 ಕ್ಕಿಂತ ಕಡಿಮೆ ಅಂಕಗಳನ್ನು ಪಡದು ಅನರ್ಹಗೊಂಡಿರುವ ಒಟ್ಟು ಮಹಾವಿದ್ಯಾಲಯಗಳು 15.
4. **ಸರ್ಕಾರಕ್ಕೆ ಸಲ್ಲಿಸುವ ಪ್ರಸ್ತಾವನೆಗಳು**

| | | |
|---|---|---|
| 1. | ಹೊಸ ಕಾಲೇಜುಗಳು | – 05 |
| 2. | ಹೊಸ ವಿಷಯಗಳು | – 12 |
| 3. | ಹೆಚ್ಚುವರಿ ಪ್ರವೇಶ ಮಿತಿ | – 05 |
| 4. | ಹೆಸರು/ಟ್ರಸ್ಟ್ ಬದಲಾವಣೆಯ ಮಹಾವಿದ್ಯಾಲಯಗಳು | – ಹೆಸರು–01, ಟ್ರಸ್ಟ್–01 |
| 5. | ಸ್ಥಳಾಂತರಗೊಂಡ ಮಹಾವಿದ್ಯಾಲಯಗಳು | – 01 |
| 6. | Renewal of permanent affiliation | – 04 |
| 7. | Fresh permanent affiliation | – 01 |

ಸರ್ಕಾರದ ಆದೇಶದನುಸಾರ ಸಂಯೋಜನೆಗೆ ಅರ್ಹತೆಯನ್ನು ಪಡೆಯಲು 45% ಕ್ಕಿಂತ ಹೆಚ್ಚು ಅಂಕಗಳನ್ನು ಪಡೆಯುವುದು ಕಡ್ಡಾಯವಾಗಿರುತ್ತದೆ. ಇದರನುಸಾರ 183 ಕಾಲೇಜುಗಳಲ್ಲಿ 167 ಕಾಲೇಜುಗಳು ಅರ್ಹತೆಯನ್ನು ಪಡೆದಿರುತ್ತವೆ. ಮುಂದುವರೆದು 15 ಕಾಲೇಜುಗಳು 45% ಕ್ಕಿಂತ ಕಡಿಮೆ ಅಂಕಗಳನ್ನು ಪಡೆದು ಅನರ್ಹವಾಗಿರುತ್ತವೆ. ಸದರಿ ಕಾಲೇಜುಗಳಿಗೆ ವಿದ್ಯಾವಿಷಯಕ ಮತ್ತು ಸಿಂಡಿಕೇಟ್ ಅನುಮೋದನೆ ಮೇರೆಗೆ ಮರುತನಿಖೆಯನ್ನು ಕೈಗೊಳ್ಳಲಾಗುವುದು ಎಂದು ಸಭೆಗೆ ತಿಳಿಸಿದರು. ಮುಂದುವರೆದು ಸಿಂಡಿಕೇಟ್ ಸದಸ್ಯರುಗಳಾದ ಶ್ರೀ ಚಂದ್ರಶೇಖರ ಲಿಂಗದಳ್ಳಿ ಇವರು ಬನಶ್ರೀ ಪದವಿ ಮಹಾವಿದ್ಯಾಲಯ, ವಡಗೇರಾ, ಜಿ: ಯಾದಗಿರಿ ಈ ಕಾಲೇಜಿನ ಸಂಲಗ್ನತೆಯ ಕುರಿತು ಸಭೆಗೆ ವಿವರಿಸುವಂತೆ ಕಾಲೇಜು ಅಭಿವೃದ್ಧಿ ಮಂಡಳಿಯ ನಿರ್ದೇಶಕರಿಗೆ ಕೇಳಿದರು ಸದರಿ ಕಾಲೇಜಿಗೆ ಸಂಬಂಧಿಸಿದಂತೆ ಸರ್ಕಾರ ನಿಯಮದಂತೆ 45% ಕ್ಕಿಂತ ಕಡಿಮೆ ಅಂಕವನ್ನು ಸದರಿ ಕಾಲೇಜು ಪಡೆದುಕೊಂಡಿರುವುದರಿಂದ 2026–27ನೇ ಸಾಲಿನ ಸಂಯೋಜನೆಯನ್ನು ಪಡೆಯಲು ಅನರ್ಹವಾಗಿರುತ್ತದೆ ಎಂದು ತಿಳಿಸಿದರು, ಮುಂದುವರೆದು ಮಾನ್ಯ ಕುಲಸಚಿವರು ಈಗಾಗಲೇ ಆ ಕಾಲೇಜಿನ ಕಟ್ಟಡ ಮತ್ತು ಭೂಮಿಗೆ ಸಂಬಂಧಿಸಿದಂತೆ, ಕಾಲೇಜು ಆಡಳಿತ ಮಂಡಳಿ ಹಾಗೂ ಶಾಲಾ ಆಡಳಿತ ಮಂಡಳಿಯ ನಡುವೆ ವ್ಯಾಜ್ಯ ಇರುತ್ತದೆ ಎಂದು ತಿಳಿಸಿದರು, ಮುಂದಿನ ಕ್ರಮದ ಬಗ್ಗೆ ಸಿಂಡಿಕೇಟ್ ಸದಸ್ಯರುಗಳು ವಿಚಾರಿಸಿದಾಗ ಮರು ತನಿಖೆಗೆ ಅಧಿಸೂಚನೆ ಹೊರಡಿಸಿ ಎಲ್ಐಸಿ ತಂಡ ಕಾಲೇಜಿಗೆ ಬೇಟಿ ನೀಡುವಷ್ಟರಲ್ಲಿ ವ್ಯಾಜ್ಯ ಇತ್ಯರ್ಥವಾಗಿ ಕಾಲೇಜು ನಡೆಸಲು ಲಭ್ಯವಾದಲ್ಲಿ ಮಾತ್ರ ಮರು ಎಲ್ಐಸಿಯಲ್ಲಿ ಅವಕಾಶ ನೀಡಬಹುದು, ಇಲ್ಲದೇ ಇದ್ದ ಪಕ್ಷದಲ್ಲಿ ಪ್ರಸ್ತುತ ನಡೆಸುತ್ತಿರುವ ವಿವಿಧ ಪದವಿ ಕೋರ್ಸುಗಳನ್ನು ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಮುಂದುವರೆಸಬಹುದೆಂದು ತಿಳಿಸದರು.

**ನಿರ್ಣಯ:**

45% ಕ್ಕಿಂತ ಹೆಚ್ಚು ಅಂಕಗಳನ್ನು ಪಡೆದು ಅರ್ಹತೆ ಹೊಂದಿರುವ ಮಹಾವಿದ್ಯಾಲಯಗಳ 2026–27ನೇ ಸಾಲಿನ ಸಂಯೋಜನೆಯನ್ನು ನೀಡಲು ಅನುಮೋದನೆಯನ್ನು ನೀಡಲಾಯಿತು. 45% ಕ್ಕಿಂತ ಕಡಿಮೆ ಅಂಕ ಪಡೆದ ಕಾಲೇಜುಗಳಿಗೆ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000 ರನ್ವಯ ಅಧಿಸೂಚನೆಯನ್ನು ಹೊರಡಿಸಿ ಮರುತನಿಖೆ ಕೈಗೊಳ್ಳಲು ಅನುಮೋದಿಸಲಾಯಿತು. ಮುಂದುವರೆದು ಬನಶ್ರೀ ಪದವಿ ಮಹಾವಿದ್ಯಾಲಯ, ವಡಗೇರಾ, ಜಿ: ಯಾದಗಿರಿ ಕಾಲೇಜಿನ ಸಂಯೋಜನೆಗೆ ಸಂಬಂಧಿಸಿದಂತೆ, ಮರು ತನಿಖೆಗೆ ಅಧಿಸೂಚನೆ ಹೊರಡಿಸಿ ಎಲ್ಐಸಿ ತಂಡ ಕಾಲೇಜಿಗೆ ಬೇಟಿ ನೀಡುವಷ್ಟರಲ್ಲಿ ವ್ಯಾಜ್ಯ ಇತ್ಯರ್ಥಪಡೆಸಿಕೊಂಡಲ್ಲಿ ಮುಂದಿನ ಕ್ರಮ ವಹಿಸಬಹುದೆಂದು ಸಭೆಯು ತಿರ್ಮಾನಿಸಿತು.

ಆ. ವಿಶ್ವವಿದ್ಯಾನಿಲಯದ ಶಿಕ್ಷಕೇತರ ಹುದ್ದೆಗಳಿಗೆ ಸಂಬಂಧಿಸಿದಂತೆ, C and R (Cadre and Recruitment Rules) ಕರಡು ಅನುಮೋದನೆ ಕುರಿತು.

**ಚರ್ಚೆ:**

ದಿನಾಂಕ 22.01.2026 ರಂದು ಜರುಗಿದ ವಿದ್ಯಾವಿಷಯಕ ಸಭೆಯಲ್ಲಿ ಈ ಕುರಿತಂತೆ "ವಿಶ್ವವಿದ್ಯಾನಿಲಯದ ಶಿಕ್ಷಕೇತರ ಹುದ್ದೆಗಳಿಗೆ ಸಂಬಂಧಿಸಿದಂತೆ, C and R (Cadre and Recruitment Rules) ಕುರಿತು ರಚಿಸಿದ ಪರಿನಿಯಮಾವಳಿಗಳನ್ನು ಸರ್ಕಾರಕ್ಕೆ ಸಲ್ಲಿಸಲು ಅನುಮೋದನೆ ನೀಡಿತು" ಎಂದು ತಿರ್ಮಾನಿಸಲಾಗಿರುತ್ತದೆ ಎಂದು ಸಭೆಗೆ ಮಾನ್ಯ ಕುಲಸಚಿವರುಗಳು ತಿಳಿಸಿದರು.

**ನಿರ್ಣಯ: ವಿದ್ಯಾವಿಷಯಕ ಸಭೆಯ ನಿರ್ಣಯವನ್ನು ಅನುಮೋದಿಸಲಾಯಿತು**

ಇ. ಬಿಸಿಎ ಮತ್ತು ಬಿಬಿಎ ಕೋರ್ಸ್‌ಗಳ ನಡೆಸುವ ಕುರಿತು.

**ಚರ್ಚೆ:**

ದಿನಾಂಕ 22.01.2026 ರಂದು ಜರುಗಿದ ವಿದ್ಯಾವಿಷಯಕ ಸಭೆಯಲ್ಲಿ ಈ ಕುರಿತಂತೆ "ಎಐಸಿಟಿ ಅನುಮೋದನೆಯನ್ನು ಪರಿಶೀಲಿಸಿ ಅನುಮೋದನೆ ಇಲ್ಲದೇ ಇರುವ ಕಾಲೇಜುಗಳಲ್ಲಿ ಬಿಸಿಎ ಮತ್ತು ಬಿಬಿಎ ಕೋರ್ಸ್‌ಗಳನ್ನು 2026-27ನೇ ಸಾಲಿನಿಂದ ಎಐಸಿಟಿ ಅನುಮೋದನೆ ಪಡೆಯುವವರೆಗೆ ಸಂಲಗ್ನತೆಯನ್ನು ತಡೆಹಿಡಿಯಲು ಸಭೆಯು ನಿರ್ಣಯಿಸಿತು" ಎಂದು ತಿರ್ಮಾನಿಸಲಾಗಿರುತ್ತದೆ ಎಂದು ಸಭೆಗೆ ಮಾನ್ಯ ಕುಲಸಚಿವರು ತಿಳಿಸಿದರು.

**ನಿರ್ಣಯ: ವಿದ್ಯಾವಿಷಯಕ ಸಭೆಯ ನಿರ್ಣಯವನ್ನು ಅನುಮೋದಿಸಲಾಯಿತು**

**ವಿಷಯ ಕ್ರಮಾಂಕ 02 : ಅಧ್ಯಕ್ಷರ ಅನುಮತಿ ಮೇರೆಗೆ ವಿಷಯಗಳು**

(01) ಸ್ನಾತಕೋತ್ತರ ಪದವಿ ಕೋರ್ಸುಗಳ ಶುಲ್ಕ ನಿಗದಿಗೆ ಸಮಿತಿಯ ರಚನೆ ಕುರಿತು

**ಚರ್ಚೆ:**

ದಿನಾಂಕ 07.01.2026 ರಂದು ಜರುಗಿದ ಸಿಂಡಿಕೇಟ್ ಸಭೆಯ ವಿಷಯ ಕ್ರಮಾಂಕ 03 ವಿಷಯಕ್ಕೆ ಸಂಬಂದಿಸಿದಂತೆ ಡಾ. ಮೀನಾಕ್ಷಿ ಖಂಡಿಮಠ ರವರು ಪ್ರಸ್ತಾಪ ಮಾಡಿ ಶುಲ್ಕಕ್ಕೆ ಸಂಬಂಧಪಟ್ಟಂತೆ ಮಹಾವಿದ್ಯಾಲಯದ ಆಡಳಿತ ಮಂಡಳಿ ಮತ್ತು ಪ್ರಾಚಾರ್ಯರೊಂದಿಗೆ ಒಂದು ವಿಶೇಷ ಸಭೆಯನ್ನು ಜರುಗಿಸಿ ವಿಶ್ವವಿದ್ಯಾನಿಲಯದ ಅಭಿಪ್ರಾಯಗಳನ್ನು ಪರಾಮರ್ಶಿಸಿ ಶುಲ್ಕ ನಿಗದಿಪಡಿಸುವುದು ಸೂಕ್ತ ಎಂದು ತಮ್ಮ ಅಭಿಪ್ರಾಯವನ್ನು ತಿಳಿಸಿದರು.

**ನಿರ್ಣಯ:**

ಸಿಂಡಿಕೇಟ್ ಸದಸ್ಯರುಗಳಾದ ಡಾ. ಮೀನಾಕ್ಷಿ ಖಂಡಿಮಠ ಇವರ ಅಧ್ಯಕ್ಷತೆಯಲ್ಲಿ ಶುಲ್ಕ ನಿಗದಿಗೆ ಒಂದು ಸಮಿತಿಯನ್ನು ರಚಿಸಲು ಸಭೆಯು ತಿರ್ಮಾನಿಸಲಾಯಿತು.

(02) ಯುವಜನೋತ್ಸವ ಕಾರ್ಯಕ್ರಮ ಆಚರಿಸುವ ಕುರಿತು

**ನಿರ್ಣಯ:**

ಸಿಂಡಿಕೇಟ್ ಸದಸ್ಯರುಗಳಾದ ಶ್ರೀ ಜೀಶಾನ್ ಅಖಿಲ್ ಸಿದ್ದಿಖಿ ಇವರನ್ನು ಒಳಗೊಂಡ ಒಂದು ಸಮಿತಿಯನ್ನು ರಚಿಸಿ ಯುವಜನೋತ್ಸವ ಏರ್ಪಡಿಸಲು ಬೇಕಾಗುವ ಪೂರ್ವಸಿದ್ಧತೆಗಳನ್ನು ಮಾಡಿಕೊಳ್ಳಲು ವಿಶ್ವವಿದ್ಯಾನಿಲಯದ ವಿದ್ಯಾರ್ಥಿ ಕಲ್ಯಾಣಾಧಿಕಾರಿಗಳ ಸಂಯೋಜನೆಯೊಂದಿಗೆ ರೂಪರೇಷಗಳನ್ನು ಸಿದ್ದಪಡಿಸಿಕೊಂಡು ಯುವಜನೋತ್ಸವ ಕಾರ್ಯಕ್ರಮ ಹಮ್ಮಿಕೊಳ್ಳಲು ಸಭೆಯಲ್ಲಿ ತಿರ್ಮಾನಿಸಲಾಯಿತು.

ಸಭೆಯ ಕೊನೆಯಲ್ಲಿ ಕುಲಸಚಿವರು ಮಾನ್ಯ ಕುಲಪತಿಗಳಿಗೆ, ಉಪಸ್ಥಿತರಿದ್ದ ಎಲ್ಲಾ ಸದಸ್ಯರಿಗೆ ಹಾಗೂ ಅಧಿಕಾರಿಗಳಿಗೆ ವಂದಿಸುತ್ತಾ ಸಭೆಯನ್ನು ಮುಕ್ತಾಯಗೊಳಿಸಿದರು.

**ಡಾ. ಚನ್ನಪ್ಪ ಎ., ಕೆ.ಎ.ಎಸ್**
**ಕುಲಸಚಿವರು**
**ಹಾಗೂ ಸದಸ್ಯ ಕಾರ್ಯದರ್ಶಿಗಳು**
**ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ**
**ರಾಯಚೂರು**

**ಪ್ರೊ. ಶಿವಾನಂದ ಕೆಳಗಿನಮನಿ**
**ಕುಲಪತಿಗಳು**
**ಹಾಗೂ ಸಿಂಡಿಕೇಟ್ ಸಭೆಯ ಅಧ್ಯಕ್ಷರು**
**ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ**
**ರಾಯಚೂರು**